**PRAJAVANI**

Date: Jan 12, 2016 Page: 3

Edition: Mysore Language: Kannada

ಐಸಿಐಸಿಐ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ರಾಮಕುಮಾರ್ ಅಭಿಮತ

# ಸಾಮಾಜಿಕ ಜವಾಬ್ದಾರಿ ಇದ್ದರೆ ಯಶಸ್ಸು

ಪ್ರಜಾವಾಣಿ ವಾರ್ತೆ

ಮೈಸೂರು: ಕೇವಲ ಬುದ್ಧಿವಂತಿಕೆಯೊಂದೇ ಯಶಸ್ಸಿಗೆ ಕಾರಣವಾಗುವುದಿಲ್ಲ. ಅದರ ಜತೆಗೆ, ಸಾಮಾಜಿಕ ಜವಾಬ್ದಾರಿ ಇದ್ದರೆ ಮಾತ್ರ ಯಶಸ್ಸು ಪಡೆಯಲು ಸಾಧ್ಯ ಎಂದು ಐಸಿಐಸಿಐ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಕೆ. ರಾಮಕುಮಾರ್ ಅಭಿಪ್ರಾಯಪಟ್ಟರು.

ಎಸ್‌ಡಿಎಂ– ಐಎಂಡಿ ಕಾಲೇಜಿನಲ್ಲಿ ಸೋಮವಾರ ನಡೆದ 'ಬುದ್ಧಿವಂತಿಕೆ, ಸಾಮರ್ಥ್ಯ ಹಾಗೂ ಸಾಮಾಜಿಕ ಜವಾಬ್ದಾರಿ' ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಪೊರೇಟ್ ಕ್ಷೇತ್ರದಲ್ಲಿ ಬುದ್ಧಿವಂತರಿಗೆ ಮಾತ್ರ ಜಾಗ ಎಂಬ ಮಾತಿದೆ. ಆದರೆ, ಅದು ಅರ್ಧಸತ್ಯ. ಬುದ್ಧಿವಂತಿಕೆ ಕೇವಲ ಮೊದಲ ಮೆಟ್ಟಿಲಷ್ಟೇ. ಉದ್ಯೋಗಿಗೆ ಸಾಮಾಜಿಕ ಜವಾಬ್ದಾರಿ ಇರಬೇಕು. ಸಮಾಜಕ್ಕೆ ಏನಾದರೂ ಕಾಣಿಕೆಯನ್ನು ನೀಡುವ ಮನಸ್ಥಿತಿ ಇದ್ದರೆ ಸಂಸ್ಥೆಯು ಬೆಳೆಯುತ್ತದೆ. ಅದರೊಂದಿಗೆ ಸಂಸ್ಥೆಯ ಉದ್ಯೋಗಿಗಳು ಬೆಳೆಯುತ್ತಾರೆ. ಹಾಗಾಗಿ, ಉದ್ಯೋಗಿಗಳಿಗೆ ಸಾಮಾಜಿಕ ಜವಾಬ್ದಾರಿಯನ್ನು ತುಂಬಬೇಕಾದ್ದು ಸಂಸ್ಥೆಯೊಂದರ ಆದ್ಯತೆಯಾಗಬೇಕು ಎಂದು ಅವರು ಸಲಹೆ ನೀಡಿದರು.

ಭಾಷೆಯ ಕಲಿಕೆಗೆ ತೊಡಕಾಗಬಾರದು. ತಿಳಿಯದ ಭಾಷೆಯಲ್ಲಿ ಜ್ಞಾನಾರ್ಜನೆ ಮಾಡಿಕೊಳ್ಳುವುದು ತಪ್ಪು. ತಿಳಿಯದ ಭಾಷೆಯಲ್ಲಿ ಶಿಕ್ಷಣ ಪಡೆಯುತ್ತಿರುವುದಕ್ಕೇ ಕೆಲವು ವಿದ್ಯಾರ್ಥಿಗಳು ತರಗತಿಗಳಲ್ಲಿ ಮಂಕಾಗಿರುತ್ತಾರೆ. ಅವರ ಸೃಜನಶೀಲತೆ ಹೊರಬರುವುದೇ ಇಲ್ಲ. ಹಾಗಾಗಿ, ಮಾತೃಭಾಷೆಯಲ್ಲಿ ಶಿಕ್ಷಣ ಕಲಿಕೆಯೇ ಶ್ರೇಷ್ಠವಾದುದು ಎಂದು ತಿಳಿಸಿದರು.

'ಇಸಿಎಎಫ್ ಮೈಕ್ರೋಫೈನಾನ್ಸ್ ಅಂಡ್ ಇನ್‌ವೆಸ್ಟ್‌ಮೆಂಟ್ ಕಂಪೆನಿ'ಯ ಸಂಸ್ಥಾಪಕ ನಿರ್ದೇಶಕ ಪಾಲ್ ಥಾಮಸ್ ಅತಿಥಿಯಾಗಿ ಮಾತನಾಡಿ, ಸಾಮಾಜಿಕ ವ್ಯವಹಾರ ಎಂಬ ಪರಿಕಲ್ಪನೆಗೂ ಸಮಾಜಸೇವೆಗೂ ಯಾವ ಸಂಬಂಧವೂ ಇಲ್ಲ. ಸಮಾಜದ ಅಭಿವೃದ್ಧಿಯ ಕೆಲಸಗಳನ್ನು ಮಾಡುತ್ತ, ಸಮಾಜದೊಂದಿಗೆ ತಾವೂ ಬೆಳೆಯುವ ಪರಿಕಲ್ಪನೆಯಿದು. ಲಾಭ ಗಳಿಕೆ ಹಾಗೂ ಸಮಾಜಸೇವೆಯ ಹದವಾದ ಮಿಶ್ರಣ ಇರಬೇಕು. ಈ ಜಾಣ್ಮೆಯನ್ನು ವ್ಯವಹಾರದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಉದ್ದಿಮೆಗಳಿಗೆ ಸೂಕ್ಷ್ಮ ಸಾಲ ನೀಡುವ ಯೋಜನೆ ಸರ್ಕಾರದ ಬಳಿ ಇದೆ. ಅದರ ಬಳಕೆಯನ್ನು ಮಾಡಿಕೊಳ್ಳಬೇಕು. ಸಾಮಾಜಿಕ ಅಭಿವೃದ್ಧಿ, ತರಬೇತಿ, ಮಹಿಳಾ ಸಬಲೀಕರಣ, ಸಮಾಲೋಚನೆ ಮತ್ತಿತರ ಕಾರ್ಯಕ್ರಮಗಳಲ್ಲಿ ಈ ರೀತಿಯ ಯೋಜನೆಗಳನ್ನು ಬಳಸಿಕೊಳ್ಳಬೇಕು ಎಂದು ಅವರು ಕಿವಿಮಾತು ಹೇಳಿದರು.

ಅಮೆರಿಕದ ಟೆಕ್ಸಾಸ್ ವಿಶ್ವವಿದ್ಯಾಲಯದ 'ಮಾಯ್ಸ್ ನಿರ್ವಹಣಾ ಶಾಲೆ'ಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಎಸ್‌ಡಿಎಂ ಐಎಂಡಿ ನಿರ್ದೇಶಕ ಎನ್.ಆರ್. ಪರಶುರಾಮನ್, 'ಮಾಯ್ಸ್ ನಿರ್ವಹಣಾ ಶಾಲೆ'ಯ ಅಂತರರಾಷ್ಟ್ರೀಯ ನಿರ್ವಹಣಾ ಅಧ್ಯಯನ ಕೇಂದ್ರದ ನಿರ್ದೇಶಕಿ ಜೂಲಿಯನ್ ಗ್ಯಾಸ್ಪರ್ ಇದ್ದರು.





ಮೈಸೂರಿನ ಎಸ್‌ಡಿಎಂ– ಐಎಂಡಿ ಕಾಲೇಜಿನಲ್ಲಿ ಸೋಮವಾರ ನಡೆದ 'ಬುದ್ಧಿವಂತಿಕೆ, ಸಾಮರ್ಥ್ಯ ಹಾಗೂ ಸಾಮಾಜಿಕ ಜವಾಬ್ದಾರಿ' ಉಪನ್ಯಾಸ ಕಾರ್ಯಕ್ರಮದಲ್ಲಿ ಐಸಿಐಸಿಐ ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕ ಕೆ. ರಾಮಕುಮಾರ್ ಮಾತನಾಡಿದರು (ಎಡಚಿತ್ರ). ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದೇಶಿ ವಿದ್ಯಾರ್ಥಿಗಳು

**ಮುಖ್ಯಾಂಶಗಳು**

- **ಬುದ್ಧಿವಂತಿಕೆ ಮಾತ್ರ ಯಶಸ್ಸಿನ ಮಾನದಂಡವಲ್ಲ**
- **ಮಾತೃಭಾಷೆಯಲ್ಲೇ ಕಲಿಕೆ ಆಗಬೇಕು**
- **ಸಮಾಜಕ್ಕೆ ಕಾಣಿಕೆ ನೀಡಿದರೆ ಉದ್ದಿಮೆ ವೃದ್ಧಿ**